ಶ್ರೀ ಕೆ. ಗಂಗಾಧರಗೌಡ.—ಮಾನ್ಯ ಅಧ್ಯಕ್ಷರೆ ಗಮನ ಸೆಳೆಯುವ ಸೂಚನೆಯನ್ನು ತಂದವರು ನಾವು.

ಅಧ್ಯಕ್ಷರು —ನೀವು ಈ ಸದನದ ಒಬ್ಬ ಹಿರಿಯ ಸದಸ್ಯರು. ಈ ಗಮನ ಸೆಳೆಯುವ ಸೂಚನೆಯ ಬಗ್ಗೆ ಕ್ವಾರಿಫಿಕೇಷನ್ ಪಡೆಯುವುದಕ್ಕೆ ನಿಮಗೆ ಅವಕಾಶ ಕೊಟ್ಟೆ. ಆದ್ದರಿಂದ ನೀವು ಹೇಳಿದಂತೆಯೇ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದೇನೂ ನಿಯಮದಲ್ಲಿ ಇಲ್ಲ ನಿಮ್ಮಲ್ಲಿ ಏನಾದರು ತೊಂದರೆಗಳು ಇದ್ದರೆ. There are so many other forums in which you can bring the same question on the floor of the House.

ಶ್ರೀ ಕೆ ಗಂಗಾಧರಗೌಡ —ಇದು ನಿಯಮದ ಪ್ರಶ್ನೆ ಅಲ್ಲ. ಮಾನವೀಯತೆಯ ಪ್ರಶ್ನೆ. ಅಲ್ಲಿ ಎಷ್ಟೋ ಜನರೈತರು ಬಿದಿ ಪಾಲು ಆಗುತ್ತಿದ್ದಾರೆ.

ಅಧ್ಯಕ್ಷರು.—ಈಗ ನಾನು ಹನುಮೇಗೌಡರನ್ನು ಕರೆದಿದ್ದೇನೆ.

(ನಿಯಮ ೩೩೪ ಮೇರೆಗೆ)

ಹಾಸನ ಜಿಲ್ಲೆಯಲ್ಲಿ ಮುಂಗಾರು ಬೆಳೆಗೆ ಬೇಕಾಗಿರುವ ರಾಸಾಯನಿಕ ಗೊಬ್ಬರವನ್ನು ದಾಸ್ತಾನು ಮಾಡುವುದು

ಶ್ರೀ ಎ. ಹೆಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರಗಳ ಅಭಾವವಿದೆ. ಮುಂಗಾರು ಮಳೆ ಬಿದ್ದ ತಕ್ಷಣ ಈ ಜಿಲ್ಲೆಯಲ್ಲಿ ಬೆಳೆಯುವ ಆಲೂಗಡ್ಡೆ, ಜೋಳ, ರಾಗಿ ಮುಂತಾದ ಬೆಳೆಗಳಿಗೆ ಹಾಕಲು ಹತ್ತಾರು ಸಾವಿರ ಟನ್ ರಾಸಾಯನಿಕ ಗೊಬ್ಬರದ ಅವಶ್ಯಕತೆ ಇದೆ. ಕಳೆದ ವರ್ಷ ಈ ದಿನಗಳಲ್ಲಿ ಹಾಸನ ಜಿಲ್ಲೆಯಲ್ಲಿ ಸುಮಾರು ೧೫ ರಿಂದ ೨೦ ಸಾವಿರ ಟನ್ ರಾಸಾಯನಿಕ ಗೊಬ್ಬರದ ದಾಸ್ತಾನಿತ್ತು. ಈ ವರ್ಷ ಈಗ ಕೇವಲ ೮೦೦ ಟನ್ ರಾಸಾಯನಿಕ ಗೊಬ್ಬರ ದಾಸ್ತಾನಿರುವುದಾಗಿ ತಿಳಿಯಿತು. ಈ ಜಿಲ್ಲೆಗೆ ಮುಂಗಾರು ಬೆಳೆಗೆ ಬೇಕಾಗುವ ರಾಸಾಯನಿಕ ಗೊಬ್ಬರವನ್ನು ದಾಸ್ತಾನು ಮಾಡಲು ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ವ್ಯವಸಾಯ ಸಚಿವರ ಗಮನ ಸೆಳೆಯಲಾಗಿದೆ.

ಶ್ರೀ ಕೆ. ಜೆ. ಜಾರ್ಜ್.—ವ್ಯವಸಾಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದು ಮಾನ್ಯ ಸದಸ್ಯರಿಗೆ ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

೨) ಚರ್ಚ್ ಆಫ್ ಸೌತ್ ಇಂಡಿಯಾ ಹಾಸ್ಪಿಟಲ್, ಗದಗ್ ಇಲ್ಲಿ ಹೆಚ್‌ಡಬ್ಲ್ಯೂಟಿ ಕೋರ್ಸನ್ನು ಮುಂದುವರಿಸುವ ಪರವಾನಿಗೆ ನೀಡುವ ಬಗ್ಗೆ

K. H. PATIL.—I call the attention of the Hon. Minister for Health and cooperation regarding the long pending representation to grant permission as recommended by the Director of Health and Family welfare to continue HWT course to the church of South India Hospital under MCH 80 f 90 dated 17-1-90, is pending with the Government causing inconvenience to the public at Gadag.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರ ಪರವಾಗಿ ನಾನು ಈ ಹೇಳಿಕೆಯನ್ನು ಕೊಡುತ್ತಿದ್ದೇನೆ.

ಚರ್ಚ್ ಆಫ್ ಸೌತ್ ಇಂಡಿಯಾ ಹಾಸ್ಪಿಟಲ್, ಗದಗ್, ಈ ಸಂಸ್ಥೆಯು ೨೦ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ತರಬೇತಿ ಕೊಡಲು ಅನುಮತಿಯ ಪ್ರಸ್ತಾವನೆಯನ್ನು ದಿನಾಂಕ ೧೭-೧-೯೦ ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಧಾರವಾಡ ಇವರು ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರಿಗೆ ಸಲ್ಲಿಸಿದ್ದರು. ಈ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುವುದಿಲ್ಲ. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ ೨೨-೩-೯೦ ರಂದು ತರಬೇತಿಯನ್ನು ಮುಂದುವರೆಸಲು ಆದೇಶವನ್ನು ಹೊರಡಿಸಿದ್ದಾರೆ.